# ಯೋಹಾನನ ಸುವಾರ್ತೆಗೆ ಒಂದು ಪೀಠಿಕೆ

ಡೊನಾಲ್ಡ್ ಗುತ್ರಿಯು ತನ್ನ *New Testament Introduction* ದಲ್ಲಿ, ಸುಮಾರು ಒಂದು ನೂರು ಪುಟಗಳನ್ನು ಯೋಹಾನನ ಸುವಾರ್ತೆಯ ಹಿನ್ನೆಲೆಯಲ್ಲಿ ಒಳಗೊಂಡಿರುವ ಅನೇಕ ವಿಷಯಗಳಿಗೆ ಮುಡುಪಾಗಿಟ್ಟಿದ್ದಾನೆ. ಗುತ್ರಿಯವರ ನಿರ್ಣಯಗಳೊಂದಿಗೆ ವಿಷಯಗಳ ಸಾರಂಶವು ಈ ಕೆಳಗೆ ಇರುತ್ತದೆ.

## ಯೋಹಾನನ ಸುವಾರ್ತೆಯ ವಿಶಿಷ್ಟ ಗುಣಲಕ್ಷಣಗಳು

*ಹಳೇ ಒಡಂಬಡಿಕೆಯ ಸ್ಥಾನ.* ಯೇಸುವಿನ ಕಥೆಯು ಹಳೇ ಒಡಂಬಡಿಕೆಯ ಒಡಂಬಡಿಕೆ, ಪಾತ್ರಗಳು ಮತ್ತು ವಾಗ್ದಾನದ ಮಾತುಗಳಲ್ಲಿ ವಿವರಿಸಲ್ಪಟ್ಟಿದೆ. ನಿಕೊದೇಮನು ಯೇಸುವನ್ನು ಯೆಹೂದಿ ಬೋಧಕನಂತೆ ನೋಡಿದನು (3:2), ಹಾಗೂ ಯೇಸುವು ತನ್ನ ವಿರೋಧಿಗಳಿಗೆ ಉತ್ತರಕೊಡಲು ಹಳೇ ಒಡಂಬಡಿಕೆಯ ಪರಿಶುದ್ಧ ಬರಹಗಳನ್ನು ಉಪಯೋಗಿಸಿದನು (10:34). ಒಳ್ಳೆ ಕುರುಬನ ಹಳೇ ಒಡಂಬಡಿಕೆಯ ಉಪಮೆಯು ಮಾಡುವಂತೆ, ಯೇಸುವಿನ ಬಗ್ಗೆ ಯೋಹಾನನ ಪ್ರಸ್ತುತಪಡಿಸುವಿಕೆಯಲ್ಲಿ ಮೋಶೆ ಮತ್ತು ಆರೋನರು ಪ್ರಮುಖವಾಗಿ ಕಾಣುತ್ತಾರೆ.

> … ನಮ್ಮ ಕರ್ತನ ಹಳೇ ಒಡಂಬಡಿಕೆಯ ಉಪಯೋಗವು ಹಾಗೂ ಸುವಾ ರ್ತಿಕನ ಸ್ವಂತ-ವ್ಯಾಖ್ಯಾನಗಳು ಎರಡೂ ಎಲ್ಲಾ ಪರಿಶುದ್ಧ ಬರಹವು ಕ್ರಿಸ್ತನ ಕಡೆಗೆ ತೋರಿಸುತ್ತವೆ ಎಂದು ಒಪ್ಪಿಕೊಳ್ಳುತ್ತವೆ. ಆತನು ಹಳೆಯದರ ನೆರವೇರು ವಿಕೆಯಾಗಿದ್ದಾನೆ, ಮತ್ತು ಈ ಸಂಗತಿಯು ಸುವಾರ್ತೆಯ ತತ್ವಗಳನ್ನು ವ್ಯಾಖ್ಯಾನಿ ಸುವದರಲ್ಲಿ ನಮ್ಮನ್ನು ನಡಿಸತಕ್ಕದ್ದು.[1]

*ಪರಿಶುದ್ಧಾತ್ಮನ ಬಗ್ಗೆ ಬೋಧನೆ.* ಇತರ ಯಾವುದೇ ಸುವಾರ್ತೆಗಿಂತ ಯೋಹಾನನ ಸುವಾರ್ತೆಗೆ ಪರಿಶುದ್ಧಾತ್ಮನ ಬಗ್ಗೆ ಹೇಳಲು ಹೆಚ್ಚಾದದ್ದು ಇರುತ್ತದೆ. ನಿಕೊದೇಮನೊಂದಿಗೆ ಯೇಸುವಿನ ಚರ್ಚೆಯಲ್ಲಿ ಪರಿಶುದ್ಧಾತ್ಮನು ಪ್ರಾಮುಖ್ಯವಾದ ಭಾಗವಾಗಿದ್ದನು ಮತ್ತು 14ರಿಂದ 17ರ ವರೆಗಿನ ಅಧ್ಯಾಯಗಳಲ್ಲಿಯ ಯೇಸುವಿನ ವಿಯೋಗ ವಂದನೆಯ ಉಪದೇಶದಲ್ಲಿ ಇನ್ನೂ ಹೆಚ್ಚು ಮಹತ್ವದ ಭಾಗವಾಗಿದ್ದನು. ಈ ಸುವಾರ್ತೆಯಲ್ಲಿ ದಾಖಲೆಯಾದ ಯೇಸುವಿನ ಮಾತುಗಳು, ಆತನು ತಂದೆಯ ಬಳಿಗೆ ಏರಿ ಹೋಗುವಾಗ, ಪರಿಶುದ್ಧಾತ್ಮನು ಆತನ ಶಿಷ್ಯರಿಗೆ ಆದರಿಕನಂತೆ ಬರುವನು ಎಂಬುವುದನ್ನು ಸ್ಪಷ್ಟಪಡಿಸುತ್ತದೆ.

*ದೊಡ್ಡ ಪ್ರಸ್ತಾಪಗಳ ಪ್ರಭುತ್ವ.* "ಜೀವ," "ಬೆಳಕು," "ಪ್ರೀತಿ," "ನಂಬಿಕೆ," "ನಾನು ಇದ್ದೇನೆ," ಮತ್ತು "ಸತ್ಯ" ಇಂಥ ಪದಗಳನ್ನು ಮತ್ತು ಮಾತುಗಳನ್ನು, ಈ ಸುವಾರ್ತೆಯ ದೊಡ್ಡ ಪ್ರಸ್ತಾಪಗಳ ಬೆಳವಣಿಗೆಯಿಂದ ವೈಶಿಷ್ಟತೆ ಹೊಂದಿದೆ ಎಂಬುದನ್ನು ಗುರುತಿಸಲು ನಮೂದಿಸಬಹುದು. ಇವುಗಳಲ್ಲಿ ಕೆಲವು ಇತರ ಸುವಾರ್ತೆಗಳಲ್ಲಿ ಇದ್ದರೂ, ಅವು ಯೋಹಾನನ ಸುವಾರ್ತೆಯಲ್ಲಿಯಂತೆ ಮತ್ತಾಯ, ಮಾರ್ಕ ಇಲ್ಲವೇ ಲೂಕನಲ್ಲಿ ಎಲ್ಲಿಯೂ ಅಷ್ಟು ಬಹಳವಾಗಿ ಉಪಯೋಗಿಸಲ್ಪಟ್ಟಿರುವದಿಲ್ಲ.

*ಚಲನೆಯ ತುಲನಾತ್ಮಕ ಕೊರತೆ.* ಯೇಸುವು ಹೇಳಿದ್ದಕ್ಕೆ ಈ ಸುವಾರ್ತೆಯಲ್ಲಿ ಬಹಳಷ್ಟು

ಸ್ಥಳವು ಕೊಡಲ್ಪಟ್ಟಿದ್ದರಿಂದ, ಯೇಸುವು ಮಾಡಿದ್ದರ ಬಗ್ಗೆ ಬಹಳ ಕಡಿಮೆ ಮಾಹಿತಿಯು ಕೂಡಿಸಲಟ್ಟಿದೆ, ಹೀಗಿದ್ದರೂ ಚಲನೆಯು ಸಂಪೂರ್ಣವಾಗಿ ಇಲ್ಲದೇ ಇರುವದಿಲ್ಲ, ಮತ್ತು ಇತರ ಸುವಾರ್ತೆಗಳಿಗಿಂತ ಹೆಚ್ಚು ಸಲ ಯೆರೂಸಲೇಮಿಗೆ ಪ್ರಯಾಣಿಸಿದ್ದನ್ನು ಯೋಹಾನನು ನಮೂದಿಸುತ್ತಾನೆ.

*ಯೇಸುವಿನ ಶಬ್ದ ಚಿತ್ರ.* ಸಸಾರಾಂಶ ಸುವಾರ್ತೆಗಳೊಂದಿಗೆ ಹೋಲಿಸಿದರೆ, ಯೋಹಾನನ ಸುವಾರ್ತೆಯು "ಮನುಷ್ಯ ಕುಮಾರನು" ಎಂಬ ಬಿರುದನ್ನು ಸ್ವಲ್ಪವಾಗಿ ಉಪಯೋಗಿಸುತ್ತದೆ, ಯೇಸು ಮತ್ತು ತಂದೆಯಾದ ದೇವರ ಮಧ್ಯದಲ್ಲಿಯ ಸಂಬಂಧದ ಬಗ್ಗೆ ಹೆಚ್ಚು ಹೇಳುತ್ತದೆ. ಮತ್ತು ಯೇಸುವಿನ ಪಾತ್ರವನ್ನು ಯೆಹೂದಿ ಮೆಸ್ಸೀಯನಂತೆ ಸ್ಪಷ್ಟಪಡಿಸುತ್ತದೆ. ಯೇಸುವಿನ ಮಾನವತೆಯ ಬಗ್ಗೆ ಹೇಳಲು ಯೋಹಾನನಿಗೂ ಬಹಳಷ್ಟು ಇರುವುದು. ಯೇಸುವು ಕಾನಾದಲ್ಲಿ ಕುಟುಂಬದ ಘರ್ಷಣೆಯಲ್ಲಿಯ ನೋಟಗಳನ್ನು ಪಡೆದುಕೊಳ್ಳುತ್ತೇವೆ. ಸುಖರ ಬಾವಿಯ ಬಳಿಯಲ್ಲಿ ಆತನು ದಣಿದವನಾಗಿದ್ದುದನ್ನು, ಬೆಥಾನ್ಯದಲ್ಲಿ ಕಳವಳಗೊಂಡವನಾಗಿಯೂ ಅಳುವವನಾಗಿಯೂ ಇರುವದನ್ನು ಮತ್ತು ಶಿಲುಬೆಯ ಮೇಲೆ ಬಾಯಾರಿದವನನ್ನಾಗಿಯೂ ನೋಡುತ್ತೇವೆ.

## ಗ್ರಂಥ ಕರ್ತೃತ್ವ

ಬರಹಗಾರನು ತಾನು ದಾಖಲಿಸುತ್ತಿರುವ ಘಟನೆಗಳ ಪ್ರತ್ಯಕ್ಷ ದರ್ಶಿಯಾಗಿದ್ದಾನೆ (1:14). ಅವನು ಸಹಜವಾಗಿ "ಯೇಸುವು ಪ್ರೀತಿಸಿದ ಶಿಷ್ಯನಾಗಿದ್ದಾನೆ" (21:20, 24), ಹನ್ನೆರಡು ಜನರಲ್ಲಿ ಒಬ್ಬನಾಗಿದ್ದಾನೆ.

ಗ್ರಂಥ ಕರ್ತನಿಗೆ ಯೆಹೂದಿ ಪದ್ಧತಿಗಳ ವಿವರವಾದ ಜ್ಞಾನವಿತ್ತು (2:6; 7:37; 18:28; 19:31-42). ಅವನು ಯೆಹೂದಿ ಚರಿತ್ರೆಯೊಂದಿಗೆ ಚೆನ್ನಾಗಿ ಪರಿಚಿತಿವುಳ್ಳವನಾಗಿದ್ದನು. (ದೇವಾಲಯದ ಕಟ್ಟಡ, ಜನರ ರಾಜಕೀಯ ಮನೋಭಾವನೆ ಮಹಾಯಾಜಕನ ಪಾತ್ರ ಮತ್ತು ಪರಂಪರೆ, ಇತ್ಯಾದಿ.) ಇದಲ್ಲದೇ ಪಾಲೆಸ್ತೀನಿನ ಭೂಗೋಲ, ಯೆರೂಸಲೇಮಿನಲ್ಲಿ ಮತ್ತು ಗ್ರಾಮಾಂತರ ಪ್ರದೇಶದಲ್ಲಿ ಗುತ್ರಿ ಹೀಗೆ ತೀರ್ಮಾನಿಸಿದನು:

> ಇದು [ಯೋಹಾನನ ಸುವಾರ್ತೆಯು ಅಪೊಸ್ತಲನಾದ ಯೋಹಾನನಿಂದ ಬರೆಯಲ್ಪಟ್ಟಿತು ಎಂಬ ನಂಬಿಕೆಯು] ... ಸಾಂಪ್ರದಾಯಕ ದೃಷ್ಟಿ ಕೋನವಾಗಿದೆ ಇದಕ್ಕೆ ಬಹಳ ವಿರೋಧಿಗಳಿದ್ದರೂ ಇದಕ್ಕೆ ಆಂತರಿಕ ಪುರಾವೆಯಲ್ಲಿ ಬಹಳ ಬೆಂಬಲವಿದೆ, ಇದನ್ನು ನಿರ್ಣಾಯಕವಾಗಿ ಖಂಡಿಸುವ ಪುರಾವೆ ಇರುವದಿಲ್ಲವೆಂದು ಹೇಳಬಹುದು, ಈ ದೃಷ್ಟಿಕೋನವು, ಇಡೀಯಾಗಿ, ಅದು ತನ್ನ ತೊಂದರೆಗಳು ಇಲ್ಲದ್ದಾಗಿದ್ದರೂ, ಬೇರೆಯವುಗಳಿಗಿಂತ ಹೆಚ್ಚು ಘಟನೆಗಳನ್ನು ಎಣಿಸುವಂತೆ ತೋರುತ್ತದೆ.[2]

## ಉದ್ದೇಶ

ಬೈಬಲಿನಲ್ಲಿಯ ಒಂದು ಪುಸ್ತಕದ ಉದ್ದೇಶವು ಅದನ್ನು ಓದುವವರಿಂದ ಯಾವಾಗಲೂ ಚರ್ಚಿಸಲ್ಪಟ್ಟ ಒಂದು ವಿಷಯವಾಗಿದೆ. ಯೋಹಾನನ ಸುವಾರ್ತೆಯು ಅದರ ಉದ್ದೇಶವು ಹೇಳಲ್ಪಟ್ಟದ್ದರಲ್ಲಿ ಅದ್ವಿತೀಯವಾದದ್ದಾಗಿದೆ. ಗ್ರಂಥ ಕರ್ತನು ತಾನೇ ಹೀಗೆ ಬರೆದಿದ್ದಾನೆ,

> ಯೇಸು ಇನ್ನು ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ; ಆದರೆ ಯೇಸು ದೇವ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ; ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡೆಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ (20:30, 31).

ಅನೇಕ ಇತರ ಸಂಬಂಧಪಟ್ಟ ವಿಷಯಗಳು ಸುವಾರ್ತೆಯಲ್ಲಿ ಸಂಭೋಧಿಸಲ್ಪಟ್ಟಿದ್ದರು, ಸೃಷ್ಟಿ ಮತ್ತು ವಿಶ್ವಾಸದ ಬೆಳವಣಿಗೆಯ ಲೇಖಕನ ಉದ್ದೇಶದಂತೆ ನೋಡು ವಂಥದ್ದರ ಕೇಂದ್ರ ದಲ್ಲಿ ಉಳಿಯತಕ್ಕದ್ದು.

## ದಿನಾಂಕ

ಒಂದು ಸಮಯದಲ್ಲಿ ಅನೇಕ ಪಂಡಿತರು ಯೋಹಾನನ ಸುವಾರ್ತೆಯು ಎರಡನೆಯ ಶತಮಾನದ ಕೊನೆಯ ಕಾಲು ಭಾಗದಲ್ಲಿ ಬರೆಯಲ್ಪಟ್ಟಿರಬೇಕು ಎಂಬುದರಲ್ಲಿ ತೃಪ್ತರಾಗಿದ್ದರು. ಇದು ಅಪೊಸ್ತಲ ಯೋಹಾನನನ್ನು ಬಿಟ್ಟು ಬೇರೊಬ್ಬನನ್ನು ಲೇಖಕನನ್ನಾಗಿ ಮಾಡುತ್ತದೆ, ಮತ್ತು ಲೇಖಕನು ಯೇಸುವಿನ ಸೇವೆಗೆ ಪ್ರತ್ಯಕ್ಷ ದರ್ಶಿಯಾಗಿರಲಿಲ್ಲವೆಂಬುದನ್ನು ಅನ್ವಯಿಸುತ್ತದೆ. ಹೀಗಿದ್ದರೂ 1934ರಲ್ಲಿ ಯೋಹಾನ 18:31-33, 37, 38 ವಚನಗಳನ್ನೊಳಗೊಂಡ ಒಂದು ಪಪೈರಸ್ ಅವಶೇಷವು ಇಂಗ್ಲಾಂಡಿನ ಮ್ಯಾಂಚೆಸ್ಟರದಲ್ಲಿಯ ಜಾನ್ ರೈಲಾಂಡ್ಸ್ ಲೈಬ್ರರಿಯಲ್ಲಿ ಕಂಡು ಹಿಡಿಯಲ್ಪಟ್ಟಿತು (ಇದು 1920ರಲ್ಲಿ ಈಜಿಪ್ಟ್‌ದಿಂದ ಇಂಗ್ಲಾಂಡಿಗೆ ತರಲ್ಪಟ್ಟಿತು). ಪರಿಣಿತರು ಈ ಬರಹವನ್ನು ಎರಡನೆಯ ಶತಮಾನದ ಮೊದಲನೆಯ ಕಾಲು ಭಾಗದ್ದೆಂದು ದಿನಾಂಕ ನೇಮಿಸಿದ್ದಾರೆ, ಬಹುಶಃ ಕ್ರಿ.ಶ. 125ರ ಸುಮಾರಿಗಿರುತ್ತದೆ. ಅಂದರೆ ಕ್ರಿ.ಶ. 125ರ ಸುಮಾರಿಗೆ ಯೋಹಾನನ ಸುವಾರ್ತೆಯು ನೈಲ್ ನದಿಯ ದೂರದ ಪ್ರಾಂತ್ಯದಲ್ಲಿ ತಿಳಿಯಲ್ಪಟ್ಟಿತ್ತು ಎಂದು ಅರ್ಥ ವಾಗುತ್ತದೆ. ಮೂಲವು ಎಷ್ಟು ಸಮಯ ಮೊದಲು ಬರೆಯಲ್ಪಟ್ಟಿತು ಎಂಬುದು ಅನಿಶ್ಚಿತವಾಗಿದೆ.

ಈಗಾಗಲೇ ತಿಳಿಯಲ್ಪಟ್ಟಂತೆ, ಅಪೊಸ್ತಲ ಯೋಹಾನನು ಈ ಸುವಾರ್ತೆಯನ್ನು ಬರೆ ದಿದ್ದರೆ, ಆಗ ಇದು ಬಹುಶಃ ಕ್ರಿ.ಶ. 90 ಮತ್ತು 100ರ ಮಧ್ಯದಲ್ಲಿ ಬರೆಯಲ್ಪಟ್ಟಿರಬೇಕು.

## ಯೋಹಾನನ ಸುವಾರ್ತೆಯ ಮತ್ತು ಸಸಾರಾಂಶ ಸುವಾರ್ತೆಗಳ ಮಧ್ಯದಲ್ಲಿ ಸಂಬಂಧ

### ಹೋಲಿಕೆಗಳು

ಸಸಾರಾಂಶ ಸುವಾರ್ತೆಗಳಂತೆ[3] ಯೋಹಾನನ ಸುವಾರ್ತೆಯು ಸ್ನಾನಿಕನಾದ ಯೋ ಹಾನನ ಕಥೆಯನ್ನು ಒಳಗೊಂಡಿರುತ್ತದೆ. ಎಲ್ಲಾ ಸುವಾರ್ತೆಯ ವಿವರಗಳು ಶಿಷ್ಯರ ಕರೆ ಯುವಿಕೆಯನ್ನು ಮತ್ತು ಯೇಸುವು ಐದು ಸಾವಿರ ಜನರಿಗೆ ಊಟ ಮಾಡಿಸಿದ್ದನ್ನು ದಾಖಲೆ ಮಾಡುತ್ತದೆ.

ಇತರ ಸುವಾರ್ತೆಗಳೊಂದಿಗೆ, ಯೋಹಾನನು ಯೇಸುವಿನ ಯೆರೂಸಲೇಮಿನೊಳಗೆ ಜಯೋತ್ಸವದ ಪ್ರವೇಶವನ್ನು ಹೇಳುತ್ತಾನೆ. ಹಾಗೆಯೇ, ಎಲ್ಲರೂ ಪೇತ್ರನ ಅಲ್ಲಗಳೆಯುವಿಕೆಯನ್ನು ಕೂಡಿಸುತ್ತಾರೆ. ನಿರೀಕ್ಷಿಸಿದಂತೆ, ಎಲ್ಲಾ ನಾಲ್ವರೂ ಯೇಸುವಿನ ನ್ಯಾಯ ವಿಚಾರಣೆ, ಶಿಲುಬೆ ಹಾಕಲ್ಪಟ್ಟಿದ್ದನ್ನು ಮತ್ತು ಪುನರುತ್ಥಾನವನ್ನು ಕುರಿತು ಮಾಹಿತಿಯನ್ನು ಒದಗಿಸುತ್ತಾರೆ.

### ಭಿನ್ನತೆಗಳು

ಯೋಹಾನನ ಸುವಾರ್ತೆಯಲ್ಲಿ ಇಲ್ಲದಂಥ ಸಸಾರಾಂಶ ಸುವಾರ್ತೆಗಳಲ್ಲಿಯ ವಿವರಗಳು, ವಂಶಾವಳಿ, ಕನ್ನಿಕೆಯಿಂದ ಜನನ, ಯೇಸುವಿನ ಬಾಪ್ತಿಸ್ಮ ಮತ್ತು ಶೋಧನೆ, ರೂಪಾಂತರ, ಎಲ್ಲಾ ಸಾಮ್ಯಗಳು, ಕರ್ತನ ಭೋಜನವನ್ನು ಸ್ಥಾಪಿಸಿದ್ದು, ಗೆತ್ಸೇಮನೆಯಲ್ಲಿ ಹೋರಾಟ, ಮತ್ತು ದಿವಾರೋಹಣ. ಸಸಾರಾಂಶ ಸುವಾರ್ತೆಗಳಲ್ಲಿ ಇಲ್ಲದಂತೆ ಯೋಹಾನ ಸುವಾರ್ತೆಯಲ್ಲಿ ಒಳಗೊಂಡಿರುವ ವಿಷಯಗಳು ಪ್ರಸ್ತಾವನೆ, ಯೇಸುವಿನ ಮೊದಲಿನ ಯೂದಾಯದಲ್ಲಿಯ ಸೇವೆ, ನಿಕೊದೇಮನೊಂದಿಗೆ ಮತ್ತು ಸಮಾರ್ಯ ಸ್ತ್ರೀಯೊಂದಿಗೆ ಆತನ ಚರ್ಚೆಗಳು,

ಲಾಜರನ್ನು ಎಬ್ಬಿಸಿದ್ದು, ಮತ್ತು ಶಿಷ್ಯರ ಪಾದಗಳನ್ನು ತೊಳೆದದ್ದು. ಯೋಹಾನ ಸುವಾರ್ತೆಯು ಹಲವಾರು ದೀರ್ಘವಾದ ಬೋಧನಾ ಭಾಗಗಳನ್ನು ಒಳಗೊಂಡಿರುತ್ತದೆ. ಇವು ಸಸಾರಾಂಶ ಸುವಾರ್ತೆಗಳಲ್ಲಿ ಇರುವುದಿಲ್ಲ. ಸುವಾರ್ತೆಗಳಲ್ಲಿ ಯೇಸುವಿನೊಂದಿಗೆ ಇಪ್ಪತ್ತೇಳು ಮುಖಾಮುಖಿ ಸಂದರ್ಶನಗಳು ಹೇಳಲ್ಪಟ್ಟಿವೆ. ಮತ್ತು ಹೆಚ್ಚಾದವುಗಳು ಯೋಹಾನನಲ್ಲಿ ಕಂಡು ಬರುತ್ತವೆ.[4]

ಪ್ರಮುಖ ಕಾಲಾನುಕ್ರಮವಾದ ಭಿನ್ನತೆಗಳು ಯೇಹಾನನ ಮತ್ತು ಇತರ ಸುವಾರ್ತೆಗಳ ವಿವರಣೆಗಳಲ್ಲಿ ಇರುತ್ತವೆ. ಪ್ರಾಥಮಿಕವಾದ ಭಿನ್ನತೆಯು ಸಸಾರಾಂಶ ಸುವಾರ್ತೆಗಳು ಬಹಿರಂಗ ಸೇವೆಯು ಗಲಿಲಾಯದಲ್ಲಿ ನಡೆಯಿತೆಂದು ವಿವರಿಸಿದ್ದು, ಯೇಸುವು ಶಿಲುಬೆಯ ಮೇಲೆ ಸಾಯುವದಕ್ಕೆ ಹೋದಾಗ, ಯೆರೂಸಲೇಮಿಗೆ ಹೋದದ್ದರ ಬಗ್ಗೆ ಕೇವಲ ದಾಖಲೆಯಾಗಿರುವುದು ಆಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಯೋಹಾನನ ಸುವಾರ್ತೆಯು ಯೆರೂಸಲೇಮಿಗೆ ಹಲವಾರು ಸಲ ಹೋದದ್ದನ್ನು ವಿವರಿಸುತ್ತದೆ (2:13; 5:1; 7:10).

ಟಿಪ್ಪಣಿಗಳು

[1]Donald Guthrie, *New Testament Introduction,* rev. ed. (Downers Grove, Ill.: InterVarsity Press, 1970), 238. [2]Ibid, 264. [3]"ಮೊದಲಿನ ಮೂರು ಸುವಾರ್ತೆಗಳು, ಮತ್ತಾಯ, ಮಾರ್ಕ, ಮತ್ತು ಲೂಕ, ಸಸಾರಾಂಶ ಎಂದು ಕರೆಯಲ್ಪಟ್ಟಿವೆ. ಯಾಕಂದರೆ ಅವು ಕ್ರಿಸ್ತನ ಜೀವಿತವನ್ನು ಒಂದು ಸಾಮಾನ್ಯವಾದ ದೃಷ್ಟಿಕೋನದಿಂದ ಸಮೀಕ್ಷೆ ಮಾಡುತ್ತವೆ (*sun*, with; *opsis*, seeing)" (W. Graham Scroggie, *A Guide to the Gospels* [Old Tappan, N.J.: Fleming H. Revell Co., 1962], 83). [4]Robert G. Gromacki, *New Testament Survey* (Grand Rapids, Mich.: Baker Book House, 1974), 135.